C.C.272/2020 P.W.1

ದಿನಾಂಕ 20.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ ವಿ ಜಿ ವಕೀಲರಿಂದಃ

ಆರೋಪಿಗೆ ನಾನು ಹಣವನ್ನು ಒಂದೇ ಬಾರಿ ನೀಡಿರುತ್ತೇನೆ. ಎಲ್ಲಾ ಹಣದ ಮುಖ ಬೆಲೆ 500 ರೂಪಾಯಿ ಆಗಿರುತ್ತದೆ. ಸದರಿ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ನಿಪಿ.1 ಎ ಸಹಿ ಆರೋಪಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಎ ಸಹಿಯನ್ನು ಆರೋಪಿ ನನ್ನ ಸಮಕ್ಷಮದಲ್ಲಿ ಮಾಡಿರುತ್ತಾರೆ. ಸದರಿ ದಿನದಂದು ಅವರು ಒಟ್ಟು ಎಷ್ಟು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ನಿಪಿ.1 ಎ ಸಹಿಗೂ ಹಾಗೂ ನಿಪಿ.5 ಎ ಸಹಿಗೂ ವ್ಯತ್ಯಾಸ ಇರುವ ಬಗ್ಗೆ ತಿಳಿಯಲು ಬರವಣಿಗೆ ತಜ್ಞರಿಂದ ಪರೀಕ್ಷಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ ಎಂದರೆ ಸರಿ. ಆರೋಪಿ ನನಗೆ 10 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಆರೋಪಿ ಮಾತು ಬಿಟ್ಟು ಸುಮಾರು 1 ವರ್ಷ ಆಗಿರಬಹುದು. ಈ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ಲಾಕ್ ಡೌನ್ ಇತ್ತು ಎಂದರೆ ಸರಿ.

ನಾನು ದೂರಿನಲ್ಲಿ ನಮೂದು ಮಾಡಿರುವಂತೆ ಆರೋಪಿಗೆ ಹಣವನ್ನು ನೀಡಿದ ದಿನದಂದು ಆರೋಪಿ ಈ ಊರಿನಲ್ಲಿ ವಾಸವಾಗಿರುವುದಿಲ್ಲ, ಮಂಗಳೂರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ನಿಪಿ.1 ನ್ನು ಆರೋಪಿ ಸಹಿ ಮಾಡಿ ನನಗೆ ಯಾವತ್ತು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 15.06.2020 ರಂದು ಆರೋಪಿ Quarantine ನಲ್ಲಿ ಇದ್ದ ಬಗ್ಗೆ ಪಂಚಾಯಿತಿಯವರು ದಾಖಲೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಬ್ಯಾಂಕ್ ಖಾತೆಯ Statement ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಪಿ.1 ಎ ಸಹಿ ವ್ಯತ್ಯಸ ಆಗಿರುತ್ತದೆ ಎಂದು ಬ್ಯಾಂಕ್ ನವರು ಹಿಂಬರಹ ನೀಡಿದ ನಂತರ ಆರೋಪಿಯ ವಿರುದ್ಧ ನಾನು ಯಾವುದೇ ದೂರನ್ನು ಠಾಣೆಗೆ ನೀಡಿರುವುದಿಲ್ಲ.

ಪ್ರತಿದಿನ 700-800 ದುಡಿಮೆ ಮಾಡುವವರಿಗೆ ಸರ್ಕಾರ ಬಿ ಪಿ ಎಲ್ ಪಡಿತರ ಚೀಟಿಯನ್ನು ನೀಡುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ಹಣ ನೀಡಿ ಅದನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನಿಪಿ.1 ನ್ನು ಅವರು ನೀಡಿರುತ್ತಾರೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ1 ರಲ್ಲಿ ನಮೂದು ಮಾಡಿರುವ ಹಣವನ್ನು ನೀಡುವಷ್ಟು ಹಣವನ್ನು ನೀಡಲು ನನಗೆ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭವನ್ನು ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.